ಅಸಲು ದಾವಾ ನಂಃ 23/2022
ಡಿ ಡಬ್ಲ್ಯುಃ 1

**<u>ದಿನಾಂಕಃ 21-02-2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>**

<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಪಿಎಲ್‌ಎಸ್ ವಕೀಲರಿಂದಃ</u>

ಸಾಕ್ಷಿಗೆ ಒಂದು ದಾಖಲೆ ತೋರಿಸಲಾಗಿ ಸದರಿ ದಾಖಲೆಯ ಪ್ರಕಾರ ರಾಜ್ ಗೋಪಾಲ್ ಜೊತೆ ಕಮಿನಿಕೇಷನ್ ಮಾಡಿರುತ್ತೀರಿ ಎಂದರೆ ಸಾಕ್ಷಿ ಅದು ಎಡಿಟಿಂಗ್ ಇರಬಹುದು ಎಂದು ಉತ್ತರಿಸಿರುತ್ತಾರೆ. ನನ್ನ ಮತ್ತು ರಾಜ್ ಗೋಪಾಲ್ ನಡುವೆ ಆದ ವಾಟ್ಸಪ್ ಕಮಿನಿಕೇಷನ್ ನ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ. ನಿಪಿ-2 ರ ಪ್ರಕಾರ ಗಿರೀಜಾದೃವ ವಿಳಾಸ ಆರ್ ಆರ್ ನಗರ, ಬೆಂಗಳೂರು ಎಂದು ಇರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರು ಬೆಂಗಳೂರು ವಿಳಾಸವನ್ನು ಕೊಟ್ಟಿದ್ದರು ಎಂದು ಉತ್ತರಿಸಿರುತ್ತಾರೆ. ಫೆಬ್ರವರಿ 2022 ರ ಪೂರ್ವದಲ್ಲಿ ವಾದಿ ಎಲ್ಲೆಲ್ಲಿ ಹಾಗೂ ಯಾರ ಜೊತೆ ವಾಸ ಇದ್ದರು ಎಂಬ ಬಗ್ಗೆ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ನಿಡಿ-10 ರಂತೆ ನಮ್ಮ ವಕೀಲರು ಗಿರೀಜಾ ದೃವ ಇವರಿಗೆ ನೋಟೀಸ್ ಕಳುಹಿಸಿರುತ್ತಾರೆ ಎಂದರೆ ಸರಿ. ನಿಡಿ-10 ರಲ್ಲಿ ಗಿರೀಜಾ ಇವರು ಆರ್ ಆರ್ ನಗರದಲ್ಲಿ ಇಲ್ಲದೇ ಇರುವ ವಿಚಾರ ಗೊತ್ತಿದ್ದರೂ ಸಹ ದುರುದ್ದೇಶದಿಂದ ಅಲ್ಲಿಗೆ ನೋಟೀಸ್ ಕಳುಹಿಸಿರುತ್ತೇವೆ ಎಂದರೆ ಸಾಕ್ಷಿ ಅವರೇ ಆ ವಿಳಾಸ ಕೊಟ್ಟಿದ್ದರು ಎಂದು ಉತ್ತರಿಸಿರುತ್ತಾರೆ.

2. ನಿಪಿ-3 ರಂತೆ ವಾದಿ ಪರ ವಕೀಲರು ನಮಗೆ ನೋಟೀಸ್ ನೀಡಿದ್ದರು ಎಂದರೆ ಸರಿ. ನಿಪಿ-3 ರ ನೋಟೀಸ್ ಗೆ ನಾವು ಪ್ರತ್ಯುತ್ತರ ನೋಟೀಸ್ ನೀಡಲು ತೊಂದರೆ ಇರಲಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾವು ನೋಟೀಸ್ ಕೊಟ್ಟಿದ್ದೆವು ಎಂದು ಉತ್ತರಿಸಿರುತ್ತಾರೆ. ನಮ್ಮ ವಕೀಲರು ವಾದಿ ಪರ ವಕೀಲರ ವಿಳಾಸಕ್ಕೆ ಪ್ರತ್ಯುತ್ತರ ನೋಟೀಸ್ ನೀಡಿಲ್ಲ ಎಂದರೆ ಸರಿ. ಆ ರೀತಿ ನೋಟೀಸ್ ಕಳುಹಿಸಲು ಯಾವುದೇ ತೊಂದರೆ ಇರದಿದ್ದರೂ ದುರುದ್ದೇಶ ಪೂರ್ವಕವಾಗಿ ಯಾವುದೇ ನೋಟೀಸ್ ಕಳುಹಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ರಾಜ್ ಗೋಪಾಲ್ ನಡುವೆ ಆದ ಮೊಬೈಲ್ ಕಮಿನಿಕೇಷನ್ ನಲ್ಲಿ ಕರಾರನ್ನು ರದ್ದು ಮಾಡುತ್ತೇವೆ ಎಂದು ನೋಟೀಸ್ ಕಳುಹಿಸಿದ ಬಗ್ಗೆ ಹೇಳಿರುವುದಿಲ್ಲ ಎಂದರೆ ಸಾಕ್ಷಿ ಅವರಿಗೆ ಮೊಬೈಲ್ ನಲ್ಲಿ ಕರೆ ಮುಖಾಂತರ ತಿಳಿಸಿದ್ದೆವು

ಎಂದು ಉತ್ತರಿಸಿರುತ್ತಾರೆ. ನಾನು ರಾಜ್ ಗೋಪಾಲ್ ಇವರಿಗೆ ಮೆಸೇಜ್ ಮುಖಾಂತರ ಕರಾರನ್ನು ರದ್ದು ಮಾಡಿರುವ ಬಗ್ಗೆ ನೋಟೀಸ್ ಕೊಟ್ಟ ವಿಚಾರವನ್ನು ಹೇಳಿರುವುದಿಲ್ಲ ಎಂದರೆ ಸರಿ. ನಾನು ಪ್ರತಿ ಬಾರಿ ರಾಜ್ ಗೋಪಾಲ್ ಜೊತೆ ಕಮಿನಿಕೇಷನ್ ಮಾಡುವಾಗ ಕ್ರಯಪತ್ರ ಮಾಡಿಕೊಡಲು ಸಿದ್ದರಿದ್ದೇವೆ ಹೆಚ್ಚಿ ನ ಹಣ ಕೊಡುವಂತೆ ನಾವು ಅವರನ್ನು ಕೇಳುತ್ತಿದ್ದೆವು ಎಂದರೆ ಸರಿಯಲ್ಲ. ನಿಪಿ-2 ರ ಖಂಡಿಕೆ 13 ರಲ್ಲಿ ಬರೆದ ವಿಚಾರ ಸತ್ಯವಾಗಿರುತ್ತದೆ. ಹದ್ದುಬಸ್ತು ಮಾಡಿಸಿದ ಬಗ್ಗೆ ನ್ಯಾಯಾಲಯಕ್ಕೆ ದಾಖಲಾತಿ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ 11ಇ ನಕ್ಷೆ ಕೊಟ್ಟಿರುತ್ತೇನೆ ಹದ್ದುಬಸ್ತು ಬಗ್ಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ನಿಪಿ-2 ರ ಖಂಡಿಕೆ 5 ರ ಪ್ರಕಾರ ಆಸ್ತಿಗೆ ಸಂಬಂಧಪಟ್ಟ ವಿಭಾಗ ಪತ್ರ, ಕ್ರಯಪತ್ರ ಮತ್ತು ವಿಲ್ ಹಾಗೂ ಪೂರ್ವಜರಿಗೆ ಆಸ್ತಿ ಹೇಗೆ ಬಂದವು ಎಂಬ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸಾಕ್ಷಿ ವಾದಿಯ ಮಗ ಕಿರಣ್ ಕುಮಾರ್ ಇವರಿಗೆ ದಾಖಲೆಗಳನ್ನು ಕೊಟ್ಟಿದ್ದೆವು ಎಂದು ಉತ್ತರಿಸಿರುತ್ತಾರೆ. ನಾವು ಈ ರೀತಿ ದಾಖಲೆಗಳನ್ನು ಕೊಟ್ಟ ಬಗ್ಗೆ ಅವರಿಂದ ಯಾವುದೇ ಹಿಂಬರಹವನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿ. ನಾನು ವಾದಿಗೆ ಯಾವುದೇ ದಾಖಲೆಯನ್ನು ಕೊಡದೇ ಇದ್ದರೂ ಕೊಟ್ಟಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ನಿಡಿ-1 ರಿಂದ 6 ದಾಖಲೆಗಳನ್ನು ನಾನು ಜನವರಿ 2023 ರಲ್ಲಿ ಸಂಬಂಧಿಸಿದ ಪ್ರಾಧಿಕಾರದಿಂದ ಪಡೆದುಕೊಂಡಿರುತ್ತೇನೆ ಎಂದರೆ ಸರಿ. ನಿಪಿ-2 ರಲ್ಲಿ ನಾವು ಪಡೆದುಕೊಂಡ ಮುಂಗಡ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳುವ ಅಧಿಕಾರ ನಮಗೆ ಇರುವುದಿಲ್ಲ ಎಂದರೆ ಸರಿ. ನಾವು ಕ್ರಯಪತ್ರ ಮಾಡಿಕೊಳ್ಳಲು ಸಾಕಷ್ಟು ದಾಖಲೆಗಳನ್ನು ಒದಗಿಸದೇ ಇದ್ದರು ನಾವು ಕ್ರಯ ಪತ್ರ ಮಾಡಿಕೊಳ್ಳಲು ತಯಾರಿದ್ದೇವೆ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ವಾದಿ ನಮಗೆ ಕೊಡಬೇಕಾದ ಬಾಕಿ ಮುಂಗಡ ಹಣವನ್ನು ಕೊಡಲು ಸಿದ್ದರಿದ್ದರೂ ಸಹ ನಾವು ಹೆಚ್ಚಿ ನ ಹಣ ಬೇಡಿಕೆ ಇಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಿಡಿ-7 ರಲ್ಲಿ ನಾವು ಕಿರಣ್‌ಧ್ರುವ ಇವರಿಗೆ ದಾಖಲೆಗಳನ್ನು ಕೊಟ್ಟಿರುವ ಬಗ್ಗೆ ನಮ್ಮ ವಕೀಲರ ಮುಖಾಂತರ ಕಳುಹಿಸಿದ ನೋಟೀಸ್ ನಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾವು ದಾಖಲೆಗಳನ್ನು ಒದಗಿಸಿದ್ದೆವು ಎಂದು ಉತ್ತರಿಸಿರುತ್ತಾರೆ. ನಿಡಿ-7 ರಲ್ಲಿ ಕೆಲವು ದಾಖಲೆಗಳನ್ನು ಪುನಃ ಕೊಟ್ಟ ಬಗ್ಗೆ ನಮೂದಿಸಿಲ್ಲ ಎಂದರೆ ಸರಿ. ಕರಾರಿನ

ಪ್ರಕಾರ ನಾವು ಕ್ರಯಪತ್ರ ಮಾಡಿಕೊಡಲು ಬಾಧ್ಯಸ್ಥರಿದ್ದರು ಸಹ ಈಗ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಈಗಲೂ ಸಹ ಬಾಕಿ ಕ್ರಯದ ಹಣವನ್ನು ಕೊಡಲು ಸಿದ್ದರಿರುತ್ತಾರೆ ಎಂದರೆ ಸಾಕ್ಷಿ ನಮಗೆ ಕೊಡಬೇಕಾದ 86 ಲಕ್ಷ ಕೊಟ್ಟರೆ ಕ್ರಯಪತ್ರ ಮಾಡಿಕೊಡಲು ಸಿದ್ದರಿರುತ್ತೇವೆ ಎಂದು ಉತ್ತರಿಸಿರುತ್ತಾರೆ. ವಾದಿ ನಮಗೆ ಕೇವಲ ಇನ್ನೂ 38 ಲಕ್ಷ ಕೊಡಲು ಬಾಧ್ಯಸ್ಥರಿದ್ದು ನಾವು ಅವರು ನಮಗೆ 86 ಲಕ್ಷ ಕೊಡುವುದು ಬಾಕಿ ಇರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಃಃ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ